INDIAN JOURNAL OF HISTORY AND ARCHAEOLOGY
ISSN (e):2582-225X www.ijha.in
Vol-5, Issue -4, July-August, 2023,
PageNo,63-79
Peer -Reviewed, Refereed Journal

# ಕರ್ನಾಟಕ ವಿಧಾನಸಭೆ ಚುನಾವಣೆ 2023– ಚುನಾವಣಾ ಫಲಿತಾಂಶದ ಒಂದು ವಿಶ್ಲೇಷಣೆ

ನಾಗೇಶ.ಶೆಟ್ಟಿ.[1]

**ಸಾರಾಂಶ**

2023ರ ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷದ ಗೆಲುವು ಸ್ಥಳೀಯ ಸಮಸ್ಯೆಗಳ ಮೇಲೆ ಕೇಂದ್ರೀಕರಿಸಿದ ಅವರ ಪ್ರಚಾರ ಕಾರ್ಯತಂತ್ರದಿಂದ ಸಾಧ್ಯವಾಗಿದೆ. ಭ್ರಷ್ಟಾಚಾರವನ್ನು ವಿರೋಧಿಸಿ, ಕೋಮು ಸಂಬಂಧಿಸಿದ ವಿಷಯಗಳಿಗೆ ಎಚ್ಚರಿಕೆಯ ಹೆಜ್ಜೆಯ ನಿರ್ಧಾರವನ್ನು ತೆಗೆದುಕೊಂಡಿರುವುದು, ಉತ್ತಮ ಕಾರ್ಯತಂತ್ರ, ಸ್ಥಳೀಯ ನಾಯಕತ್ವ ಮತ್ತು ಖಾತರಿ ಯೋಜನೆಯು ವಿಧಾನಸಭೆಯ ಚುನಾವಣೆಯಲ್ಲಿ ಕಾಂಗ್ರೆಸ್ ಬಹುಮತ ಪಡೆಯಲು ಸಾಧ್ಯವಾಯಿತು.

**ಪ್ರಮುಖ ಪದಗಳು:** ಕಾಂಗ್ರೆಸ್, ಬಿಜೆಪಿ, ಚುನಾವಣೆ, ಪ್ರಚಾರ, ಪ್ರಣಾಳಿಕೆ ಮತ್ತು ನಾಯಕತ್ವ

**ಪ್ರಸ್ತಾವನೆ**

ಭಾರತದ ಚುನಾವಣಾ ಆಯೋಗವು ಕರ್ನಾಟಕ ವಿಧಾನಸಭೆಯ ಅವಧಿ ಮುಗಿಯುವ ಮೊದಲು ಮುಕ್ತ, ನ್ಯಾಯಸಮ್ಮತ, ಭಾಗವಹಿಸುವ, ಪ್ರವೇಶಿಸಬಹುದಾದ, ಅಂತರ್ಗತ ಮತ್ತು ಸುರಕ್ಷಿತ ಚುನಾವಣೆಯನ್ನು ನಡೆಸಲು ಆರ್ಟಿಕಲ್ 324 ರ ಅಡಿಯಲ್ಲಿ ನೀಡಲಾದ ಅಧಿಕಾರವನ್ನು ಅನುಚ್ಛೇದ 172(1)ರ ಭಾರತದ ಸಂವಿಧಾನ ಮತ್ತು 1951 ರ ಪ್ರಜಾಪ್ರತಿನಿಧಿ ಕಾಯ್ದೆಯ ಸೆಕ್ಷನ್ 15ರ ಪ್ರಕಾರ ಚುನಾವಣೆಯ ಅಧಿಸೂಚನೆಯನ್ನು ಹೊರಡಿಸಿತು.

ಅಧಿಸೂಚನೆಯಂತೆ,ಕರ್ನಾಟಕ ವಿಧಾನಸಭೆಯಚುನಾವಣೆ 2023 ಅನ್ನು ಚುನಾವಣಾ ಆಯೋಗವು 10 ಮೇ 2023 ರಂದು ಒಂದು ಹಂತದಲ್ಲಿ ನಡೆಸಿತು, 13 ಮೇ 2023 ರಂದು ಮತ

[1]. ಸಹಾಯಕ ಪ್ರಾಧ್ಯಾಪಕರು, ರಾಜ್ಯಶಾಸ್ತ್ರ ವಿಭಾಗ,ಸರ್ಕಾರಿ ಪ್ರಥಮ ದರ್ಜೆ ಕಾಲೇಜು, ಭಟ್ಕಳ ಉ.ಕನ್ನಡ ಜಿಲ್ಲೆ.

ಎಣಿಕೆ ಮಾಡಲಾಯಿತು. ಮೂರು ಪ್ರಮುಖ ರಾಜಕೀಯ ಪಕ್ಷಗಳು ವಿಭಿನ್ನ ತಂತ್ರ ಮತ್ತು ಭರವಸೆಗಳೊಂದಿಗೆ ಚುನಾವಣೆಯಲ್ಲಿ ಪ್ರಚಾರ ಮಾಡಿದ್ದವು. ಎಲ್ಲಾ ಪಕ್ಷಗಳು ತಮ್ಮ ಆಲೋಚನೆಗಳು ಮತ್ತು ಕಾರ್ಯಕ್ರಮಗಳೊಂದಿಗೆ ಜನರನ್ನು ತಲುಪಲು ಸಾಮಾಜಿಕ ಮಾಧ್ಯಮವನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲು ಪ್ರಯತ್ನಿಸಿದವು. ಕೇಂದ್ರ ಮತ್ತು ರಾಜ್ಯ ಮಟ್ಟದ ನಾಯಕರು ರಾಜ್ಯದಾದ್ಯಂತ ವಿವಿಧ ರ್‍ಯಾಲಿ ಮತ್ತು ಕಾರ್ಯಕ್ರಮಗಳನ್ನು ನಡೆಸಿದರು. ರಾಜಕೀಯ ಪಕ್ಷಗಳ ನಡುವೆ ಪರಸ್ಪರ ವಾಗ್ವಾದಗಳು, ಟೀಕೆಗಳು, ಆರೋಪಗಳನ್ನು ಮಾಡಲಾಯಿತು.

**ಕರ್ನಾಟಕ ವಿಧಾನಸಭೆ ಚುನಾವಣೆ (ವಿಧಾನಸಭೆ) ಇತಿಹಾಸ**

**1. 1952ರ ಚುನಾವಣೆ–** ಇದನ್ನು ಮೈಸೂರು ವಿಧಾನಸಭೆ ಎಂದು ಕರೆಯಲಾಗುತ್ತದೆ, ಇದು 99 ಸದಸ್ಯರ ಒಳಗೊಂಡಿತ್ತು, ಕಾಂಗ್ರೆಸ್ 74 ಸ್ಥಾನಗಳನ್ನು ಗೆದ್ದುಕೊಂಡಿತು, ಕೆಎಂಪಿಪಿ 8 ಮತ್ತು ಸ್ವತಂತ್ರರು 11 ಸ್ಥಾನಗಳನ್ನು ಗೆದ್ದಿದ್ದರು. ಕಾಂಗ್ರೆಸ್ ಪಕ್ಷ ಸರ್ಕಾರವನ್ನು ರಚಿಸಿತು.

**2. 1957ರ ಚುನಾವಣೆ–** ಕರ್ನಾಟಕ ರಾಜ್ಯ ರಚನೆಯಾಯಿತು ಮತ್ತು ಕರ್ನಾಟಕ ವಿಧಾನಸಭೆಗೆ ಮೊದಲ ಚುನಾವಣೆ ನಡೆಸಲಾಯಿತು, 208 ಸದಸ್ಯರನ್ನುಒಳಗೊಂಡಿತ್ತು, ಕಾಂಗ್ರೆಸ್ 150 ಸ್ಥಾನಗಳನ್ನು ಗೆದ್ದುಕೊಂಡಿತು, PSP 18 ಮತ್ತು ಸ್ವತಂತ್ರರು 35 ಸ್ಥಾನಗಳನ್ನು ಗೆದ್ದರು. ಕಾಂಗ್ರೆಸ್ ಪಕ್ಷ ಸರ್ಕಾರವನ್ನು ರಚಿಸಿತು.

**3. 1962ರ ಚುನಾವಣೆ–** ಅಸೆಂಬ್ಲಿ 208 ಸದಸ್ಯರನ್ನು ಒಳಗೊಂಡಿತ್ತು, ಕಾಂಗ್ರೆಸ್ 138 ಸ್ಥಾನಗಳನ್ನು ಗೆದ್ದಿತು, ಕಖಕ 20 ಮತ್ತು ಸ್ವತಂತ್ರರು 9 ಸ್ಥಾನಗಳನ್ನು ಗೆದ್ದರು. ಕಾಂಗ್ರೆಸ್ ಪಕ್ಷ ಸರ್ಕಾರವನ್ನು ರಚಿಸಿತು.

**4. 1967ರ ಚುನಾವಣೆ–** ಅಸೆಂಬ್ಲಿ 216 ಸದಸ್ಯರನ್ನು ಒಳಗೊಂಡಿತ್ತು, ಕಾಂಗ್ರೆಸ್ 126 ಸ್ಥಾನಗಳನ್ನು ಗೆದ್ದಿತು, ಪಿಎಸ್ಪಿ 20, ಎಸ್ ಎಸ್. ಪಿ 6 ಸ್ಥಾನ ಮತ್ತು ಸ್ವತಂತ್ರರು 16 ಸ್ಥಾನಗಳನ್ನು ಗೆದ್ದರು. ಕಾಂಗ್ರೆಸ್ ಪಕ್ಷ ಸರ್ಕಾರವನ್ನು ರಚಿಸಿತು.

**5. 1972ರ ಚುನಾವಣೆ–** ಅಸೆಂಬ್ಲಿ 216 ಸದಸ್ಯರನ್ನು ಒಳಗೊಂಡಿತ್ತು, ಕಾಂಗ್ರೆಸ್ 165 ಸ್ಥಾನಗಳನ್ನು ಗೆದ್ದಿತು, ಓಅಔ 24 ಮತ್ತು ಸ್ವತಂತ್ರರು 20 ಸ್ಥಾನಗಳನ್ನು ಗೆದ್ದರು. ಕಾಂಗ್ರೆಸ್ (ಇಂದಿರಾ) ಪಕ್ಷ ಚುನಾವಣೆಯಲ್ಲಿ ಗೆದ್ದ ನಂತರ ಡಿ.ದೇವರಾಜ್ ಅರಸು ಅವರು ಮುಖ್ಯಮಂತ್ರಿಯಾದರು.

**6. 1978ರ ಚುನಾವಣೆ–** ಅಸೆಂಬ್ಲಿ 224 ಸದಸ್ಯರನ್ನು ಒಳಗೊಂಡಿತ್ತು, ಜನತಾ ಪಕ್ಷವು 59 ಮತ್ತು ಸ್ವತಂತ್ರರು 10 ಸ್ಥಾನಗಳನ್ನು ಗೆದ್ದರು. ಕಾಂಗ್ರೆಸ್ (ಇಂದಿರಾ) ಬಣ 149 ಸ್ಥಾನಗಳನ್ನು ಗೆದ್ದು, ದೇವರಾಜ್ ಅರಸು ಮುಖ್ಯಮಂತ್ರಿಯಾದರು.

**7. 1983ರ ಚುನಾವಣೆ–** ಕಾಂಗ್ರೆಸ್ (ಐ) 82 ಸ್ಥಾನಗಳನ್ನು ಗೆದ್ದುಕೊಂಡಿತು, ಜನತಾ ಪಕ್ಷವು 95 ಸ್ಥಾನಗಳನ್ನು ಗೆದ್ದಿತು, ಬಿಜೆಪಿ 18 ಸ್ಥಾನ ಮತ್ತು ಸ್ವತಂತ್ರರು 22 ಸ್ಥಾನಗಳನ್ನು ಗೆದ್ದರು. ಜನತಾ ಪಕ್ಷ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿತು. ರಾಮಕೃಷ್ಣ ಹೆಗಡೆ ಅವರು ಮೊದಲ ಕಾಂಗ್ರೆಸ್ಸೇತರ ಸರ್ಕಾರವನ್ನು ರಚಿಸಿದರು.

**8. 1985ರ ಚುನಾವಣೆ–** ಕಾಂಗ್ರೆಸ್ (ಐ) 65 ಸ್ಥಾನಗಳನ್ನು ಗೆದ್ದುಕೊಂಡಿತು, ಜನತಾ ಪಕ್ಷವು 139 ಸ್ಥಾನಗಳನ್ನು ಗೆದ್ದಿತು, ಬಿಜೆಪಿ 2 ಸ್ಥಾನ ಮತ್ತು ಸ್ವತಂತ್ರರು 13 ಸ್ಥಾನಗಳನ್ನು ಗೆದ್ದರು. ಜನತಾದಳ ಪಕ್ಷ ಸರ್ಕಾರವನ್ನು ರಚಿಸಿತು,ರಾಮಕೃಷ್ಣ ಹೆಗಡೆ ಮುಖ್ಯಮಂತ್ರಿಯಾದರು. ರಾಮಕೃಷ್ಣ ಹೆಗಡೆ ರಾಜಿನಾಮೆಯಿಂದ ಆಗಸ್ಟ್ 1988 ರಲ್ಲಿಎಸ್. ಆರ್. ಬೊಮ್ಮಾಯಿ ಮುಖ್ಯಮಂತ್ರಿಯಾದರು.

**9. 1989ರ ಚುನಾವಣೆ–** ಕಾಂಗ್ರೆಸ್ (ಐ) 178 ಸ್ಥಾನಗಳನ್ನು ಗೆದ್ದಿದ್ದರೆ, ಜನತಾ ದಳ 24, ಬಿಜೆಪಿ 40 ಸ್ಥಾನಗಳನ್ನು, ಕೆಸಿಪಿ 10 ಸ್ಥಾನಗಳನ್ನು ಮತ್ತು ಸ್ವತಂತ್ರರು 18 ಸ್ಥಾನಗಳನ್ನು ಗೆದ್ದರು. ಕಾಂಗ್ರೆಸ್ (ಐ) ಪಕ್ಷವು ಸರ್ಕಾರವನ್ನು ರಚಿಸಿತು ಮತ್ತು 1989 ರಿಂದ 1990 ರವರೆಗೆ ವೀರೇಂದ್ರ ಪಾಟೀಲ್ ಅವರನ್ನು ಮುಖ್ಯಮಂತ್ರಿಯಾಗಿ ನೇಮಿಸಲಾಯಿತು. ನಂತರ 1990 ರಿಂದ 1992 ರ ಅವಧಿಗೆ ಎಸ್ ಬಂಗಾರಪ್ಪ ಮುಖ್ಯಮಂತ್ರಿಯಾಗಿ ಯಶಸ್ವಿಯಾದರು, ಅವರ ರಾಜೀನಾಮೆ ನಂತರ ವೀರಪ್ಪ ಮೊಯ್ಲಿ ಅವರು ಉಳಿದ ಅವಧಿಗೆ ಮುಖ್ಯಮಂತ್ರಿಯಾಗಿದ್ದರು.

**10. 1994ರ ಚುನಾವಣೆ–** ಕಾಂಗ್ರೆಸ್ (ಐ) 34 ಸ್ಥಾನಗಳನ್ನು ಗೆದ್ದುಕೊಂಡಿತು, ಜನತಾದಳ 115 ಸ್ಥಾನಗಳನ್ನು ಗೆದ್ದಿತು, ಬಿಜೆಪಿ 40 ಸ್ಥಾನಗಳನ್ನು ಗೆದ್ದಿತು ಮತ್ತು ಸ್ವತಂತ್ರರು 12 ಸ್ಥಾನಗಳನ್ನು ಗೆದ್ದರು. ಜನತಾದಳ ಏಕೈಕ ದೊಡ್ಡ ಪಕ್ಷವಾಯಿತು. ಎಚ್‌ಡಿ ದೇವೇಗೌಡರು ಡಿಸೆಂಬರ್ 11, 1994 ರಿಂದ ಮೇ 31, 1996 ವರೆಗೆ ಮುಖ್ಯಮಂತ್ರಿಯಾದರು. ಮೇ 31, 1996 ರಿಂದ ಅಕ್ಟೋಬರ್ 7, 1999 ರವರೆಗೆ ಜೆ.ಎಚ್. ಪಟೇಲ್ ಮುಖ್ಯಮಂತ್ರಿಯಾಗಿಅಧಿಕಾರದಲ್ಲಿದ್ದರು.

**11. 1999ರ ಚುನಾವಣೆ–** ಕಾಂಗ್ರೆಸ್ (ಐ) 132 ಸ್ಥಾನಗಳನ್ನು, ಜನತಾ ದಳ (ಯು) 18, ಜನತಾ ದಳ (ಎಸ್) 10, ಬಿಜೆಪಿ 44 ಸ್ಥಾನಗಳನ್ನು ಮತ್ತು ಸ್ವತಂತ್ರರು 19 ಸ್ಥಾನಗಳನ್ನು ಗೆದ್ದರು. ಎಸ್‌ಎಂ ಕೃಷ್ಣ ಮುಖ್ಯಮಂತ್ರಿಯಾಗಿ ಕಾಂಗ್ರೆಸ್ ಪಕ್ಷ ಸರ್ಕಾರ ರಚಿಸಿತು.

**12. 2004ರ ಚುನಾವಣೆ–** ಕಾಂಗ್ರೆಸ್ (ಐ) 65 ಸ್ಥಾನಗಳನ್ನು, ಜನತಾ ದಳ (ಎಸ್) 58, ಬಿಜೆಪಿ 79 ಸ್ಥಾನಗಳನ್ನು ಮತ್ತು ಸ್ವತಂತ್ರರು 22 ಸ್ಥಾನಗಳನ್ನು ಗೆದ್ದರು. 2004 ರಲ್ಲಿ ಯಾವುದೇ ಪಕ್ಷವು ಬಹುಮತವನ್ನು ಪಡೆಯಲು ಸಾಧ್ಯವಾಗದ ನಂತರ ರಾಜ್ಯವು ಸಮ್ಮಿಶ್ರ ಸರ್ಕಾರಕ್ಕೆ ಸಾಕ್ಷಿಯಾಯಿತು. ಬಿಜೆಪಿ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿದ್ದರೂ, ಕಾಂಗ್ರೆಸ್ ಮತ್ತು ಜನತಾ ದಳ (ಜಾತ್ಯತೀತ) ಸಮ್ಮಿಶ್ರ ಸರ್ಕಾರವನ್ನು ರಚಿಸಿತು. 2006ರವರೆಗೆ ಧರಂಸಿಂಗ್ ರಾಜ್ಯದ ಮುಖ್ಯಮಂತ್ರಿಯಾಗಿದ್ದರು.ಸಮ್ಮಿಶ್ರ ಸರ್ಕಾರ ಪತನವಾದ ನಂತರ ಬಿಜೆಪಿ ಬೆಂಬಲದೊಂದಿಗೆ ಎಚ್‌ಡಿ ಕುಮಾರಸ್ವಾಮಿ ಅಧಿಕಾರ ವಹಿಸಿಕೊಂಡರು, ಬಿಜೆಪಿ ಬೆಂಬಲ ವಾಪಸ್ ಪಡೆದಿದ್ದಕ್ಕೆ ಅವರೂ ರಾಜೀನಾಮೆ ನೀಡಬೇಕಾಯಿತು. ನಂತರ 30 ದಿನಗಳಿಗೂ ಹೆಚ್ಚು ಕಾಲ ರಾಷ್ಟ್ರಪತಿ ಆಳ್ವಿಕೆ ಜಾರಿಯಾಯಿತು. ನಂತರ ಯಡಿಯೂರಪ್ಪ ಅವರು 2007ರಲ್ಲಿ ಕೇವಲ ಏಳು ದಿನಗಳ ಕಾಲ ಮುಖ್ಯಮಂತ್ರಿ ಪಟ್ಟ ಅಲಂಕರಿಸಿದ್ದರು, ತದನಂತರ ಮತ್ತೊಮ್ಮೆ 189 ದಿನಗಳ ಕಾಲ ರಾಷ್ಟ್ರಪತಿ ಆಳ್ವಿಕೆ ಜಾರಿಯಲ್ಲಿತ್ತು.

**13. 2008 ರ ಚುನಾವಣೆ–** ಕಾಂಗ್ರೆಸ್ (ಐ) 80 ಸ್ಥಾನಗಳನ್ನು, ಜನತಾ ದಳ (ಎಸ್) 28, ಬಿಜೆಪಿ 110 ಸ್ಥಾನಗಳನ್ನು ಮತ್ತು ಸ್ವತಂತ್ರರು 6 ಸ್ಥಾನಗಳನ್ನು ಗೆದ್ದರು. ಕರ್ನಾಟಕದ ಇತಿಹಾಸದಲ್ಲಿ ಮೊದಲ ಬಾರಿಗೆ ಬಿಜೆಪಿ ಪಕ್ಷ ಸರ್ಕಾರ ರಚನೆ ಮಾಡಿತು. ಬಹುಮತಕ್ಕೆ ಕೇವಲ ಮೂರು ಸ್ಥಾನಗಳ ಕೊರತೆಯಿಂದ ಪಕ್ಷವು ಆರು ಸ್ವತಂತ್ರ ಅಭ್ಯರ್ಥಿಗಳೊಂದಿಗೆ ಮೈತ್ರಿ ಮಾಡಿಕೊಂಡಿತು. ಬಿಎಸ್ ಯಡಿಯೂರಪ್ಪ ಮುಖ್ಯಮಂತ್ರಿಯಾದರು ಆದರೆ ನಂತರ 2011 ರಲ್ಲಿ ಭ್ರಷ್ಟಾಚಾರದ ಆರೋಪದ ಮೇಲೆ ರಾಜೀನಾಮೆ ನೀಡಬೇಕಾಯಿತು. ಅವರ ನಂತರ ಡಿವಿ ಸದಾನಂದ ಗೌಡ (2011 ರಿಂದ 2012) ಮತ್ತು ನಂತರ ಜಗದೀಶ್ ಶೆಟ್ಟರ್ (2012 ರಿಂದ 2013) ಅವರು ಅಧಿಕಾರ ವಹಿಸಿಕೊಂಡರು.

**14. 2013 ರ ಚುನಾವಣೆ–** ಕಾಂಗ್ರೆಸ್ (ಐ) 122 ಸ್ಥಾನಗಳನ್ನು, ಜನತಾ ದಳ (ಎಸ್) 40, ಬಿಜೆಪಿ 40 ಸ್ಥಾನಗಳನ್ನು, ಕೆಜೆಪಿ 6, ಬಿ.ಎಸ್. ಆರ್. ಕಾಂಗ್ರೆಸ್ 4 ಮತ್ತು ಸ್ವತಂತ್ರರು 12 ಸ್ಥಾನಗಳನ್ನು ಗೆದ್ದರು. ಕಾಂಗ್ರೆಸ್ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿತು ಮತ್ತು ಸಿದ್ದರಾಮಯ್ಯ ಮುಖ್ಯಮಂತ್ರಿಯಾದರು.

**15. 2018 ರ ಚುನಾವಣೆ–** ಕಾಂಗ್ರೆಸ್ (ಐ) 80 ಸ್ಥಾನಗಳನ್ನು, ಜನತಾ ದಳ (ಎಸ್) 37, ಬಿಜೆಪಿ 104 ಸ್ಥಾನಗಳನ್ನು ಮತ್ತು ಸ್ವತಂತ್ರರು 3 ಸ್ಥಾನಗಳನ್ನು ಗೆದ್ದರು. ಚುನಾವಣೆಯಲ್ಲಿ 104 ಸ್ಥಾನಗಳನ್ನು ಗೆಲ್ಲುವ ಮೂಲಕ ಬಿಜೆಪಿ ಏಕೈಕ ದೊಡ್ಡ ಪಕ್ಷವಾಗಿ ಹೊರಹೊಮ್ಮಿತು, ಆದರೆ ಕಾಂಗ್ರೆಸ್ ಮತ್ತು ಜೆಡಿ (ಎಸ್)ಪಕ್ಷಗಳು ಸೇರಿ ಸಮ್ಮಿಶ್ರ ಸರ್ಕಾರವನ್ನು ರಚಿಸಿದರು ಮತ್ತು ಹೆಚ್ ಡಿ ಕುಮಾರಸ್ವಾಮಿ ಅವರು 2018 ರಿಂದ 2019 ರವರೆಗೆ ಕರ್ನಾಟಕದ 12 ನೇ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದರು. ಜುಲೈ 2019 ತಿಂಗಳಿನಲ್ಲಿ, ಕಾಂಗ್ರೆಸ್‌ನ 13 ಶಾಸಕರು ಮತ್ತು ಜೆಡಿಎಸ್ ಪಕ್ಷದ 3 ಶಾಸಕರು ತಮ್ಮ ಶಾಸಕ

ಸ್ಥಾನಕ್ಕೆ ರಾಜೀನಾಮೆ ನೀಡಿದರು.ಸಮ್ಮಿಶ್ರ ಸರ್ಕಾರಕ್ಕೆ ಬಿಎಸ್ಪಿ ಶಾಸಕ ಮಹೇಶ್ ಎನ್ ಮತ್ತು 2 ಸ್ವತಂತ್ರ ಶಾಸಕರು ತಮ್ಮ ಬೆಂಬಲವನ್ನು ಹಿಂಪಡೆದರು.. ಜುಲೈ 23 ರಂದು ಕರ್ನಾಟಕ ವಿಧಾನಸಭೆಯಲ್ಲಿ ಬಹುಮತ ಪರೀಕ್ಷೆಯಲ್ಲಿ ಕುಮಾರಸ್ವಾಮಿ ಅವರ ಸರ್ಕಾರವು ತನ್ನ ಬಹುಮತವನ್ನು ಕಳೆದುಕೊಂಡಿತುಕುಮಾರಸ್ವಾಮಿ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಬಿ ಎಸ್ ಯಡಿಯೂರಪ್ಪ ಅವರ ಉತ್ತರಾಧಿಕಾರಿಯಾಗಿ ಕರ್ನಾಟಕದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು. ನಂತರ ವಯಸ್ಸಿನ ಕಾರಣಕ್ಕೆ ಪಕ್ಷದ ಹೈಕಮಾಂಡ ನಿರ್ದೇಶನದಂತೆ ಅವರು ಸಿಎಂ ಸ್ಥಾನಕ್ಕೆ ರಾಜೀನಾಮೆ ನೀಡಿದರು ಹಾಗೂ 27 ಜುಲೈ 2021 ರಂದು, ಬೊಮ್ಮಾಯಿ ಅವರು ಮುಖ್ಯಮಂತ್ರಿ ಸ್ಥಾನಕ್ಕೆ ಆಯ್ಕೆಯಾದರು, ರಾಜ್ಯದಲ್ಲಿ ಭಾರತೀಯ ಜನತಾ ಪಕ್ಷದಿಂದ ನಾಲ್ಕನೇ ಮುಖ್ಯಮಂತ್ರಿಯಾದರು.

**2023 ಕರ್ನಾಟಕ ವಿಧಾನಸಭೆಗೆ ಚುನಾವಣೆ**

ಕರ್ನಾಟಕ ವಿಧಾನಸಭೆಯ ಎಲ್ಲಾ 224 ಸದಸ್ಯರನ್ನು ಆಯ್ಕೆ ಮಾಡಲು 10 ಮೇ 2023 ರಂದು ಕರ್ನಾಟಕದಲ್ಲಿ ವಿಧಾನಸಭಾ ಚುನಾವಣೆಗಳನ್ನು ನಡೆಸಲಾಯಿತು. ಮತಗಳನ್ನು ಎಣಿಕೆಯನ್ನು ಮತ್ತು ಫಲಿತಾಂಶವನ್ನು 13 ಮೇ 2023 ರಂದು ಘೋಷಿಸಲಾಯಿತು. ಚುನಾವಣೆಯಲ್ಲಿ 73.19% ರಷ್ಟು ಮತದಾನವಾಗಿತ್ತು, ಇದು ಕರ್ನಾಟಕದ ವಿಧಾನಸಭಾ ಚುನಾವಣೆಯ ಇತಿಹಾಸದಲ್ಲಿ ದಾಖಲಾದ ಅತಿ ಹೆಚ್ಚು ಮತದಾನವಾಗಿದೆ. ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ 135 ಸ್ಥಾನಗಳನ್ನು ಪಡೆಯುವ ಮೂಲಕ ಚುನಾವಣೆಯಲ್ಲಿ ಭಾರಿ ಗೆಲುವು ಸಾಧಿಸಿತು, ಇದು 1989 ರ ಚುನಾವಣೆಗಳ ನಂತರ ಕರ್ನಾಟಕದಲ್ಲಿ ಸೀಟುಗಳು ಮತ್ತು ಮತಗಳ ಹಂಚಿಕೆಯ ಮೂಲಕ ಅವರ ಅತಿದೊಡ್ಡ ಗೆಲುವು. ಭಾರತೀಯ ಜನತಾ ಪಕ್ಷ ಮತ್ತು ಜನತಾ ದಳ (ಜಾತ್ಯತೀತ) ಸೋಲನ್ನು ಒಪ್ಪಿಕೊಂಡು ಕ್ರಮವಾಗಿ ಎರಡು ಮತ್ತು ಮೂರನೇ ಸ್ಥಾನ ಗಳಿಸಿತು.

**ಪಕ್ಷದ ಪ್ರಣಾಳಿಕೆ (ಯಾರು ಏನು ಭರವಸೆ ನೀಡುತ್ತಾರೆ)**

**ಕಾಂಗ್ರೆಸ್:** ಹಿಮಾಚಲ ಪ್ರದೇಶದಲ್ಲಿ ಕಾಂಗ್ರೆಸ್‌ನಗೆಲುವು ಕರ್ನಾಟಕದಲ್ಲಿ ರಾಷ್ಟ್ರೀಯ ನಾಯಕರಿಗೆ ಹೊಸ ಹುರುಪು ತಂದಿದ್ದರಿಂದ ಬರವಸೆಗಳ ಮಹಾಪುರವನ್ನೆ ಹರಿಸಿರುವದು ಕಾಣುತ್ತೇವೆ. ರೈತರು, ನಿರುದ್ಯೋಗಿ ಪದವೀಧರರು ಮತ್ತು ಮಹಿಳೆಯರ ನೇತೃತ್ವದ ಕುಟುಂಬಗಳಿಗೆ ಮಾಸಿಕ ಸ್ಟೈಫಂಡ್, ಜೊತೆಗೆ ಕರ್ನಾಟಕದ ಮತದಾರರಿಗೆ ಉಚಿತ ವಿದ್ಯುತ್ ಮತ್ತು ಅಕ್ಕಿ ಜೊತೆಗೆ ಇತರ ಭರವಸೆಗಳನ್ನು ಕೆಳಗೆ ವಿವರಿಸಿದಂತೆ ನೀಡಲಾಯಿತು.

**ಆಮ್ ಆದ್ಮಿ ಪಕ್ಷವು** ಮತದಾರರಿಗೆ ದೆಹಲಿ ಮಾದರಿಯ ಆಡಳಿತವನ್ನು ನೀಡುವುದಾಗಿ ಭರವಸೆ ನೀಡಿತ್ತು. ಉತ್ತಮ ಸರ್ಕಾರಿ ಶಾಲೆಗಳು, ಮೊಹಲ್ಲಾ ಚಿಕಿತ್ಸಾಲಯಗಳು, 300 ಯೂನಿಟ್ ಉಚಿತ ವಿದ್ಯುತ್ ಮತ್ತು ನಿರುದ್ಯೋಗ ಭತ್ಯೆ ಅವರ ಭರವಸೆಗಳಾಗಿದ್ದವು.

**ಎಆ(ಖ) ಪಕ್ಷ** – ಖಾಸಗಿ ವಲಯದಲ್ಲಿ ಕನ್ನಡಿಗರಿಗೆ ಉದ್ಯೋಗಗಳನ್ನು ಮೀಸಲಿಡುವುದು ಮತ್ತು ಆರ್ಥಿಕವಾಗಿ ದುರ್ಬಲ ವಿದ್ಯಾರ್ಥಿಗಳಿಗೆ ಉಚಿತ ಉನ್ನತ ಶಿಕ್ಷಣವನ್ನು ಒದಗಿಸುವ ಭರವಸೆ, "ರೈತ ಬಂಧು" ಯೋಜನೆಯು ಕೃಷಿ ಕಾರ್ಮಿಕ ಕುಟುಂಬಗಳಿಗೆ ಪ್ರತಿ ತಿಂಗಳು ₹ 2,000 ನೀಡುವ ಭರವಸೆ, ಅಲ್ಲದೆ, ರೈತರಾಗಿರುವ ಯುವಕರನ್ನು ಮದುವೆಯಾಗುವ ಹೆಣ್ಣು ಮಕ್ಕಳಿಗೆ ₹2 ಲಕ್ಷ ಆರ್ಥಿಕ ನೆರವು ನೀಡುವುದು. ಮುಸ್ಲಿಮರಿಗೆ ಶೇಕಡಾ 4 ರಷ್ಟು ಮೀಸಲಾತಿಯನ್ನು ಮರುಸ್ಥಾಪಿಸುವ ಬದ್ಧತೆಯಂತಹ ಬರವಸೆಯನ್ನು ನೀಡಿತು. ಜೆಡಿ(ಎಸ್) ಪ್ರಣಾಳಿಕೆಯಲ್ಲಿ ನೀಡಲಾಗಿರುವ ವಿವಿಧ ಭರವಸೆಗಳಲ್ಲಿ ಗರ್ಭಿಣಿಯರಿಗೆ ಆರು ತಿಂಗಳಿಗೆ ₹ 6,000, 'ಸ್ತ್ರೀ ಶಕ್ತಿ' ಸ್ವ-ಸಹಾಯ ಸಂಘಗಳ ಸಾಲ ಮನ್ನಾ, ಅಂಗನವಾಡಿ ಕಾರ್ಯಕರ್ತೆಯರಿಗೆ ಪಿಂಚಣಿ, ಆಟೋ ಚಾಲಕರಿಗೆ ತಿಂಗಳಿಗೆ ₹ 2,000, ನೋಂದಾಯಿತ ಖಾಸಗಿ ಭದ್ರತಾ ಸಿಬ್ಬಂದಿಗೆ ₹ 2,000, ಮತ್ತು ಸಿಎಂ ಪರಿಹಾರ ನಿಧಿಯಡಿ ಅಪರೂಪದ ಕಾಯಿಲೆಗಳ ಚಿಕಿತ್ಸೆಗಾಗಿ ₹25 ಲಕ್ಷದವರೆಗೆ ಧನ ಸಹಾಯ ಭರವಸೆಯನ್ನು ನೀಡಿತು.

**ಬಿಜೆಪಿ ಭರವಸೆ,** 'ಅಟಲ್ ಆಹಾರ ಕೇಂದ್ರ, 'ಪೋಷಣ' ಯೋಜನೆ, ವಿಶ್ವೇಶ್ವರಯ್ಯ ವಿದ್ಯಾ ಯೋಜನೆ, 'ಸಮನ್ವಯ' ಯೋಜನೆ, 'ಮಿಷನ್ ಸ್ವಾಸ್ಥ್ಯ ಕರ್ನಾಟಕ' ಅಡಿಯಲ್ಲಿ ನಮ್ಮ ಕ್ಲಿನಿಕ್ ಸ್ಥಾಪನೆ, ಬೆಂಗಳೂರನ್ನು ಡಿಜಿಟಲ್ ಇನ್ನೋವೇಶನ್‌ನ ಜಾಗತಿಕ ಕೇಂದ್ರವನ್ನಾಗಿ ಮಾಡುವುದು, "ಇವಿ ಸಿಟಿ" ರಚಿಸುವುದು, ಕೆ-ಅಗ್ರಿ ಫಂಡ್ ಸ್ಥಾಪನೆ, ಏಕರೂಪ ನಾಗರಿಕ ಸಂಹಿತೆ ಜಾರಿ, ಎಲ್ಲಾ ಬಿಪಿಎಲ್ ಕುಟುಂಬಗಳಿಗೆ ವಾರ್ಷಿಕವಾಗಿ 3 ಉಚಿತ ಅಡುಗೆ ಗ್ಯಾಸ್ ಸಿಲಿಂಡರ್ ಒದಗಿಸುವುದು. 'ಸರ್ವರಿಗೂ ಸೂರು ಯೋಜನೆ' ಮತ್ತು "ಒನಕೆ ಓಬವ್ವ ಸಾಮಾಜಿಕ ನ್ಯಾಯ ನಿಧಿ" ಇತ್ಯಾದಿ ಭರವಸೆಯನ್ನು ನೀಡಿತು

**ಚುನಾವಣಾ ಪ್ರಚಾರ**

ರಾಜ್ಯದ ಎಲ್ಲಾ ಮೂರು ಪ್ರಮುಖ ರಾಜಕೀಯ ಪಕ್ಷಗಳಾದ ಬಿಜೆಪಿ, ಕಾಂಗ್ರೆಸ್ ಮತ್ತು ಜನತಾ ದಳ (ಜಾತ್ಯತೀತ) ಪಕ್ಷಗಳುವಿಭಿನ್ನ ಚುನಾವಣೆಯ ಪ್ರಚಾರತಂತ್ರಗಳನ್ನು ಅಳವಡಿಸಿಕೊಂಡಿತು. ಬಿಜೆಪಿಯ ಪ್ರಚಾರವು ಪ್ರಧಾನ ಮಂತ್ರಿ ನರೇಂದ್ರ ಮೋದಿ, 'ಡಬಲ್ ಇಂಜಿನ್' ಸರ್ಕಾರ, ರಾಷ್ಟ್ರೀಯ ಸಮಸ್ಯೆಗಳು ಮತ್ತು ಕೇಂದ್ರ ಸರ್ಕಾರದ ಕಾರ್ಯಕ್ರಮಗಳ ಮೇಲೆ ಕೇಂದ್ರೀಕೃತವಾಗಿತ್ತು, ಆದರೆ ಕಾಂಗ್ರೆಸ್ ಸ್ಥಳೀಯ ಸಮಸ್ಯೆಗಳ ಮೇಲೆ ಹೆಚ್ಚು ಕೇಂದ್ರೀಕೃತವಾಗಿ ಪ್ರಚಾರ ಮಾಡಿತು ಮತ್ತು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ

ಖರ್ಗೆ, ರಾಹುಲ್ ಗಾಂಧಿ ಮತ್ತು ಪ್ರಿಯಾಂಕಾ ಗಾಂಧಿ ವಾದ್ರಾ ಕೂಡ ರಾಜ್ಯದಲ್ಲಿ ಪ್ರಚಾರ ನಡೆಸಿದರು. ಎಆ(ಖ) ಕೂಡ ಹೆಚ್ಚು ಸ್ಥಳೀಯ ಪ್ರಚಾರವನ್ನು ನಡೆಸಿತು, ಅದರ ನಾಯಕ ಎಚ್ ಡಿ ಕುಮಾರಸ್ವಾಮಿ ಅವರ ಮುಂದಾಳತ್ವದಲ್ಲಿ ಮಾಡಿತು, ಪಕ್ಷದ ಹಿರಿಯರಾದ ದೇವೇಗೌಡರು ಸಹ ಪ್ರಚಾರ ಸಭೆಯಲ್ಲಿ ಭಾಗವಹಿಸಿದ್ದರು.

**ಚುನಾವಣಾ ಸಮೀಕ್ಷೆ:**

ಮತದಾನೋತ್ತರ ಸಮೀಕ್ಷೆ ಪ್ರಕಾರ ಪ್ರಮುಖ ರಾಜಕೀಯ ಪಕ್ಷಗಳಿಗೆ ಸಂಭವನೀಯ ವ್ಯತ್ಯಾಸದ ಸೀಟುಗಳ ಸಂಖ್ಯೆಗಳು ಇಲ್ಲಿವೆ

1. ಇಂಡಿಯಾ ಟುಡೇ–ಆಕ್ಸಿಸ್ ಮೈ ಇಂಡಿಯಾ: ಕಾಂಗ್ರೆಸ್ – 122–140 ಸ್ಥಾನಗಳು, ಬಿಜೆಪಿ – 62–80 ಸ್ಥಾನಗಳು, ಜೆಡಿಎಸ್ (ಎಸ್) – 20–25 ಸ್ಥಾನಗಳು.
2. ABP News-C Voter: ಕಾಂಗ್ರೆಸ್ – 100–112 ಸ್ಥಾನಗಳು, ಬಿಜೆಪಿ – 83–95 ಸ್ಥಾನಗಳು, ಜೆಡಿಎಸ್– 21–29 ಸ್ಥಾನಗಳು.
3. ರಿಪಬ್ಲಿಕ್ ಟಿವಿ–ಪಿ ಮಾರ್ಕ್: ಕಾಂಗ್ರೆಸ್ – 94–108 ಸ್ಥಾನಗಳು, ಬಿಜೆಪಿ – 85–100 ಸ್ಥಾನಗಳು, ಜೆಡಿಎಸ್ – 24–32 ಸ್ಥಾನಗಳು.
4. ಖಟಿಜುಚಿ ಖಿಗಿ–ಅಓಫಿ: ಕಾಂಗ್ರೆಸ್ – 110–120 ಸ್ಥಾನಗಳು, ಬಿಜೆಪಿ – 80–90 ಸ್ಥಾನಗಳು, ಜೆಡಿಎಸ್ – 20–24 ಸ್ಥಾನಗಳು.
5. ಖಿಗಿ9 ಭಾರತ್ ವರ್ಷ್–ಪೋಲ್‌ಸ್ಟ್ರಾಟ್: ಕಾಂಗ್ರೆಸ್ – 99–109 ಸ್ಥಾನಗಳು, ಬಿಜೆಪಿ – 88–98 ಸ್ಥಾನಗಳು, ಜೆಡಿಎಸ್ – 21–26 ಸ್ಥಾನಗಳು.
6. Zee News-Matrize ಏಜೆನ್ಸಿ: ಕಾಂಗ್ರೆಸ್ – 103–118 ಸ್ಥಾನಗಳು, ಬಿಜೆಪಿ – 79–94 ಸ್ಥಾನಗಳು, ಜೆಡಿಎಸ್ – 25–33 ಸ್ಥಾನಗಳು.
7. ಸುವರ್ಣ ನ್ಯೂಸ್–ಜನ್ ಕಿ ಬಾತ್: ಬಿಜೆಪಿ – 94–117 ಸ್ಥಾನಗಳು, ಕಾಂಗ್ರೆಸ್ – 91–106 ಸ್ಥಾನಗಳು, ಜೆಡಿಎಸ್ – 14–24 ಸ್ಥಾನಗಳು.
8. ಪೋಲ್ ಆಫ್ ಪೋಲ್: ಕಾಂಗ್ರೆಸ್ – 107 ಸ್ಥಾನಗಳು, ಬಿಜೆಪಿ – 92 ಸ್ಥಾನಗಳು, ಜೆಡಿಎಸ್ – 23 ಸ್ಥಾನಗಳು.
9. ಟೈಮ್ಸ್ ನೌ ಇಟಿಜಿ: ಕಾಂಗ್ರೆಸ್ – 113 ಸ್ಥಾನಗಳು, ಬಿಜೆಪಿ – 85 ಸ್ಥಾನಗಳು, ಜೆಡಿಎಸ್ – 23 ಸ್ಥಾನಗಳು.

10. ನೀವ್ಸ್ ನೇಶನ್: ಕಾಂಗ್ರೆಸ್ –114 ಸ್ಥಾನಗಳು, ಬಿಜೆಪಿ – 86 ಸ್ಥಾನಗಳು, ಜೆಡಿಎಸ್ – 21 ಸ್ಥಾನಗಳು.
11. ಟುಡೇಸ್ ಚಾಣಾಕ್ಯ: ಕಾಂಗ್ರೆಸ್ – 120 ಸ್ಥಾನಗಳು, ಬಿಜೆಪಿ – 92 ಸ್ಥಾನಗಳು, ಜೆಡಿಎಸ್ – 12 ಸ್ಥಾನಗಳು.
12. ನೀವ್ಸ್ 18 ರಾಜ್‌ನೀತಿ: ಕಾಂಗ್ರೆಸ್ – 100 ಸ್ಥಾನಗಳು, ಬಿಜೆಪಿ – 92 ಸ್ಥಾನಗಳು, ಜೆಡಿಎಸ್ – 31 ಸ್ಥಾನಗಳು.

**ಕರ್ನಾಟಕ ಅಸೆಂಬ್ಲಿ ಚುನಾವಣೆಗಳ ಸಮೀಕ್ಷೆಗಳು: 2018 ಮತ್ತು 2023**

2018 ರಲ್ಲಿ, ಹೆಚ್ಚಿನ ಸಮೀಕ್ಷೆಗಳು ಬಿಜೆಪಿ ಏಕೈಕ ದೊಡ್ಡ ಪಕ್ಷವಾಗಿ ಹಂಗ್ ಅಸೆಂಬ್ಲಿ ಎಂದು ಭವಿಷ್ಯ ನುಡಿದಿದ್ದವು. 2023ರಲ್ಲಿಯೂ ಹಂಗ್ ಅಸೆಂಬ್ಲಿ ರಚನೆಯಾಗುತ್ತದೆ ಎಂದಿದ್ದವು ಹಾಗೂ ಹಲವು ಸಮೀಕ್ಷೆಗಳು ಕಾಂಗ್ರೆಸ್ ಏಕೈಕ ದೊಡ್ಡ ಪಕ್ಷ ಎಂದು ಭವಿಷ್ಯ ನುಡಿದಿದ್ದವು. 12ರಲ್ಲಿ 9 ಎಕ್ಸಿಟ್ ಪೋಲ್‌ಗಳ ಪ್ರಕಾರ ಕರ್ನಾಟಕದಲ್ಲಿ ಹಂಗ್ ಅಸೆಂಬ್ಲಿ ಇರಬಹುದು. 2 ಕಾಂಗ್ರೆಸ್‌ಗೆ ಮತ್ತು ಒಂದು ಬಿಜೆಪಿಗೆ ಸಂಪೂರ್ಣ ಗೆಲುವು ಎಂದು ಭವಿಷ್ಯ ನುಡಿದಿದ್ದರು ಆದರೆ ಅವರ ಭವಿಷ್ಯ ಸುಳ್ಳಾಗಿದೆ. ಬಹುತೇಕ ಭವಿಷ್ಯವಾಣಿಗಳು ಮತದಾರರ ಮನಸ್ಸನ್ನು ಪರಿಣಾಮಕಾರಿಯಾಗಿ ಅರ್ಥಮಾಡಿಕೊಳ್ಳಲು ವಿಫಲವಾಗಿವೆ.

**ಚುನಾವಣಾ ಫಲಿತಾಂಶ:**

ಭಾರತೀಯ ರಾಷ್ಟ್ರೀಯ ಕಾಂಗ್ರೆಸ್ 135 ಸ್ಥಾನಗಳನ್ನು ಪಡೆಯುವ ಮೂಲಕ ಚುನಾವಣೆಯಲ್ಲಿ ಭಾರಿ ಗೆಲುವು ಸಾಧಿಸಿತು, ಭಾರತೀಯ ಜನತಾ ಪಕ್ಷ ಮತ್ತು ಜನತಾ ದಳ (ಜಾತ್ಯತೀತ) ಸೋಲನ್ನು ಅನುಭವಿಸಿತು.

**ಕಾಂಗ್ರೆಸ್ ಪಕ್ಷದ ಪ್ರಣಾಳಿಕೆ ಮತ್ತು ಪರಿಣಾಮ:**

'ಸರ್ವ ಜನಾಂಗದ ಶಾಂತಿಯ ತೋಟ' (ಎಲ್ಲಾ ಸಮುದಾಯಗಳ ಶಾಂತಿಯುತ ಉದ್ಯಾನ) ಉದ್ಘೋಷದೊಂದಿಗೆ ಪ್ರಣಾಳಿಕೆಯನ್ನು ಕಾಂಗ್ರೆಸ್ ಬಿಡುಗಡೆ ಮಾಡಿದೆ.

**ಅವರು ತಮ್ಮ ಪ್ರಚಾರದಲ್ಲಿ ಕೇಂದ್ರೀಕರಿಸಿದ ಐದು ಪ್ರಮುಖ ಖಾತರಿಗಳು:**

1. ಗೃಹ ಜ್ಯೋತಿ ಯೋಜನೆ ಅಡಿಯಲ್ಲಿ, ಪ್ರತಿ ತಿಂಗಳು 200 ಯೂನಿಟ್ ಉಚಿತ ವಿದ್ಯುತ್‌ಅನ್ನು ಎಲ್ಲಾ ಮನೆಗಳಿಗೆ ನೀಡುವ ಭರವಸೆ ನೀಡಲಾಯಿತು.

2. ಗೃಹ ಲಕ್ಷ್ಮಿ ಯೋಜನೆಯುಡಿಯಲ್ಲಿ ಕುಟುಂಬದ ಮಹಿಳಾ ಮುಖ್ಯಸ್ಥರಿಗೆ ಮಾಸಿಕ ₹ 2000 ನೀಡುವುದು.

3. ರಾಜ್ಯದಾದ್ಯಂತ ಎಲ್ಲಾ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣವನ್ನು ಒದಗಿಸಲು ಉಚಿತ ಬಸ್ ಪ್ರಯಾಣ ಯೋಜನೆ.

4. ನಿರುದ್ಯೋಗಿ ಪದವೀಧರರಿಗೆ ₹ 3,000 ಮತ್ತು ನಿರುದ್ಯೋಗಿ ಡಿಪ್ಲೊಮಾ ಹೊಂದಿರುವವರಿಗೆ ₹ 1,500 ಪ್ರತಿ ತಿಂಗಳು ಪಾವತಿಸಲು ಯುವ ನಿಧಿ ಯೋಜನೆ.

5. ಬಡತನ ರೇಖೆಗಿಂತ ಕೆಳಗಿರುವ ಕುಟುಂಬಗಳಿಗೆ ಪ್ರತಿ ವ್ಯಕ್ತಿಗೆ ತಿಂಗಳಿಗೆ 10 ಕೆಜಿ ಅಕ್ಕಿಯನ್ನು ಉಚಿತವಾಗಿ ನೀಡುವ ಅನ್ನ ಭಾಗ್ಯ ಯೋಜನೆ.

**ಇತರ ಖಾತರಿಗಳು**

**1. ಪಿಂಚಣಿ ಯೋಜನೆಯಲ್ಲಿ–** 2006 ರ ನಂತರ ಸೇವೆಗೆ ಸೇರಿದ ರಾಜ್ಯ ಸರ್ಕಾರಿ ನೌಕರರ ಹಳೆಯ ಪಿಂಚಣಿ ಯೋಜನೆಯನ್ನು ಜಾರಿಗೆ ತರಲು ಸಹಾನುಭೂತಿಯಿಂದ ಪರಿಗಣಿಸುವುದು.

2. **ಶಿಕ್ಷಣ–** ಓಇಕ ಅನ್ನು ರದ್ದುಪಡಿಸಲಾಗುವುದು ಮತ್ತು ರಾಜ್ಯ ಶಿಕ್ಷಣ ನೀತಿಯನ್ನು ಪ್ರಕಟಿಸಲಾಗುವುದು. **"**ಕಾಂಗ್ರೆಸ್, ಭಾರತ ಮತ್ತು ಕರ್ನಾಟಕದ ನಿಜವಾದ ಮೌಲ್ಯಗಳನ್ನು ಮತ್ತು ಪಠ್ಯ ಪುಸ್ತಕಗಳಲ್ಲಿ ವೈಜ್ಞಾನಿಕ ಮನೋಭಾವವನ್ನು ಪುನಃಸ್ಥಾಪಿಸುತ್ತದೆ**"**.

**3. ಮೀಸಲಾತಿ –** ಎಸ್‌ಸಿ, ಎಸ್‌ಟಿ, ಒಬಿಸಿ ಮತ್ತು ಅಲ್ಪಸಂಖ್ಯಾತರ ಆಶಯಗಳನ್ನು ಸರಿಹೊಂದಿಸಲು ಮೀಸಲಾತಿ ಕೋಟಾ ಮ್ಯಾಟ್ರಿಕ್ಸ್ ಅನ್ನು 75% ಕ್ಕೆ ಹೆಚ್ಚಿಸಲಾಗುವುದು, ಪಕ್ಷವು ಮುಸ್ಲಿಮರಿಗೆ 4% ಮೀಸಲಾತಿ ಕೋಟಾವನ್ನು ಪುನಃಸ್ಥಾಪಿಸಲು ಭರವಸೆ ನೀಡಿತು, ಮೀಸಲಾತಿಯನ್ನುಬಿಜೆಪಿ ಸರ್ಕಾರರದ್ದುಗೊಳಿಸಿತ್ತು.

**4. ಕಾನೂನುಗಳು–** ಬಿಜೆಪಿ ಸರ್ಕಾರವು ಜಾರಿಗೆ ತಂದಿರುವ ರೈತ ವಿರೋಧಿ ಕಾನೂನುಗಳನ್ನು ರದ್ದುಗೊಳಿಸುವುದರ ಜೊತೆಗೆ ಬಿಜೆಪಿ ಸರ್ಕಾರವು ಅಂಗೀಕರಿಸಿದ ಎಲ್ಲಾ "ಅನ್ಯಾಯ ಮತ್ತು ಜನವಿರೋಧಿ ಕಾನೂನುಗಳನ್ನು" ಒಂದು ವರ್ಷದೊಳಗೆ ರದ್ದುಗೊಳಿಸುತ್ತದೆ. ರೈತರ ಮೇಲಿನ ಎಲ್ಲಾ "ರಾಜಕೀಯ ಪ್ರೇರಿತ" ಪ್ರಕರಣಗಳನ್ನು ಹಿಂಪಡೆಯುವುದಾಗಿಯೂ ಘೋಷಿಸಿದೆ. ಕೆಲಸದ ಸಮಯವನ್ನು

ದಿನಕ್ಕೆ 8 ಗಂಟೆಗಳಿಂದ 12 ಗಂಟೆಗಳಿಗೆ ಹೆಚ್ಚಿಸುವ ಕಾರ್ಖಾನೆಗಳ ಕಾಯ್ದೆಗೆ ತಿದ್ದುಪಡಿಯನ್ನು ರದ್ದುಗೊಳಿಸುವುದಾಗಿ ಕಾಂಗ್ರೆಸ್ ಘೋಷಿಸಿತು.

**4. ದ್ವೇಷದ ವಿರುದ್ಧ ಕ್ರಮ–** "ಜಾತಿ ಮತ್ತು ಸಮುದಾಯದ ಆಧಾರದ ಮೇಲೆ ಸಮುದಾಯಗಳ ನಡುವೆ ದ್ವೇಷವನ್ನು ಹರಡುವ ವ್ಯಕ್ತಿಗಳು ಮತ್ತು ಸಂಸ್ಥೆಗಳ ವಿರುದ್ಧ ಕಠಿಣ ಕ್ರಮ ತೆಗೆದುಕೊಳ್ಳಲಾಗುವುದು. ಕಾನೂನನ್ನು ಪವಿತ್ರವೆಂದು ಕಾಂಗ್ರೆಸ್ ನಂಬುತ್ತದೆ ಮತ್ತು ಕಾನೂನುಗಳನ್ನು ಉಲ್ಲಂಘಿಸಿದರೆ ಭಜರಂಗದಳ ಮತ್ತು ಪಿಎಫ್ಐ ನಂತಹ ಸಂಘಟಣೆಗಳನ್ನು ನಿಷೇಧಿಸಲಾಗುವುದು.

**5. ಸಾಮಾಜಿಕ ನ್ಯಾಯ–** ಕಾಂಗ್ರೆಸ್ ಸಮಾನ ಅಭಿವೃದ್ಧಿ ಮತ್ತು ಸಾಮಾಜಿಕ ನ್ಯಾಯದಲ್ಲಿ ನಂಬಿಕೆ ಇಟ್ಟಿದ್ದು ಇದಕ್ಕಾಗಿ ₹ 10,000 ಕೋಟಿಯನ್ನು ಅಲ್ಪಸಂಖ್ಯಾತರ ಕಲ್ಯಾಣ ಮತ್ತು ಪೂಜಾ ಸ್ಥಳಗಳ ಸಂರಕ್ಷಣೆಗಾಗಿ ವಿನಿಯೋಗಿಸಲಾಗುವುದು.

**6. ವೇತನ–** ಅಂಗನವಾಡಿ ಮತ್ತು ಮಿನಿ ಅಂಗನವಾಡಿ ಕಾರ್ಯಕರ್ತೆಯರ ವೇತನವನ್ನು ಕ್ರಮವಾಗಿ ₹ 15,000 ಮತ್ತು ₹ 10,000 ಕ್ಕೆ ಹೆಚ್ಚಿಸಲಾಗುವುದು ಮತ್ತು ರಾತ್ರಿ ಕರ್ತವ್ಯದಲ್ಲಿರುವ ಪೊಲೀಸ್ ಸಿಬ್ಬಂದಿ ಪ್ರತಿ ವರ್ಷ ಹೆಚ್ಚುವರಿ ತಿಂಗಳ ಸಂಬಳದ ಜೊತೆಗೆ ತಿಂಗಳಿಗೆ ₹ 5,000 ಹೆಚ್ಚುವರಿ ಭತ್ಯೆಯನ್ನು ನೀಡಲಾಗುವದು.

**7. ಕೃಷಿ–**ಹಾಲಿಗೆ ಪ್ರತಿ ಲೀಟರ್‌ಗೆ ₹ 5 ರಿಂದ ₹ 7 ಕ್ಕೆ ರೈತರಿಗೆ ಆರ್ಥಿಕ ಪ್ರೋತ್ಸಾಹವನ್ನು ಹೆಚ್ಚಿಸುವುದಾಗಿ ಭರವಸೆ ನೀಡಿತು. ಮತ್ಸ್ಯ ಕ್ರಾಂತಿ ಯೋಜನೆಯಡಿ, ನೀಲಿ ಆರ್ಥಿಕತೆಯಲ್ಲಿ ಆದಾಯವನ್ನು ಸುಧಾರಿಸಲು ₹ 12,000 ಕೋಟಿ ಹೂಡಿಕೆ ಮಾಡಲಾಗುವುದು.

**8. ಅಸಂಘಟಿತ ಕೇಲಸಗಾರರಿಗೆ ವೆಲ್ ಫೇರ್ ಬೋರ್ಡ್–** ಅಸಂಘಟಿತ ಕೆಲಸದ ಮೇಲೆ ಅವಲಂಬಿತರಾಗಿರುವ ಜನರ ಸಂಖ್ಯೆ ಹೆಚ್ಚುತ್ತಿದ್ದು, ಆಟೋ ಚಾಲಕರು ಮತ್ತು ಟ್ಯಾಕ್ಸಿ ಡ್ರೈವರ್‌ಗಳಿಗೆ ಪ್ರತ್ಯೇಕ ಬೋರ್ಡ್‌ಗಳ ಜೊತೆಗೆ ಅಸಂಘಟಿತರ ಕಲ್ಯಾಣ ಮಂಡಳಿಯನ್ನು ಸ್ಥಾಪಿಸುವುದಾಗಿ ಕಾಂಗ್ರೆಸ್ ಭರವಸೆ ನೀಡಿತು. ಎಲ್ಲಾ ಜಿಲ್ಲೆಗಳಲ್ಲಿ ಹಾಕಿಂಗ್ ಝೋನ್‌ಗಳ ಭರವಸೆ ನೀಡಿದ್ದರೂ, ಗಾರ್ಮೆಂಟ್ಸ್ ಕಾರ್ಮಿಕರಿಗೆ ಕನಿಷ್ಠ ವೇತನದ ಭರವಸೆಯನ್ನೂ ನೀಡಿದೆ.

**9. ವಿಶೇಷ ಪ್ರಕಟಣೆಗಳು–**

ಎ. ಡಿಫಿಬ್ರಿಲೇಟರ್ (ಎಇಡಿ) ಪಡೆಯಲು ವೈದ್ಯರು, ಚಿಕಿತ್ಸಾಲಯಗಳು ಮತ್ತು ನರ್ಸಿಂಗ್ ಹೋಮ್‌ಗಳಿಗೆ ಸಬ್ಸಿಡಿ ನೀಡಲು ಪುನೀತ್ ರಾಜ್‌ಕುಮಾರ್ ಹೃದಯ ಆರೋಗ್ಯ ಯೋಜನೆಯನ್ನು ಸ್ಥಾಪಿಸುವ ಯೋಜನೆಯನ್ನು ಕಾಂಗ್ರೆಸ್ ಘೋಷಿಸಿದೆ. 2021 ರಲ್ಲಿ ಹೃದಯ ಕಾಯಿಲೆಯಿಂದ ಚಿಕ್ಕ ವಯಸ್ಸಿನಲ್ಲಿ ನಿಧನರಾದ ಕನ್ನಡದ ಜನಪ್ರಿಯ ನಟನ ಹೆಸರನ್ನು ಈ ಯೋಜನೆಗೆ ಹೆಸರಿಸಲಾಗಿದೆ.

ಬಿ. ವಿವಿಧ ದೇಶಗಳಲ್ಲಿ ಹೆಚ್ಚಿನ ಸಂಖ್ಯೆಯ ಕನ್ನಡಿಗರು ನೆಲೆಸಿರುವ ಹಿನ್ನೆಲೆಯಲ್ಲಿ, ಅನಿವಾಸಿ ಭಾರತೀಯ ಕನ್ನಡಿಗರಿಗಾಗಿ ಪ್ರತ್ಯೇಕ ಸಚಿವಾಲಯವನ್ನು ಸ್ಥಾಪಿಸುವುದಾಗಿ ಕಾಂಗ್ರೆಸ್ ಘೋಷಿಸಿದೆ. ಸಾಗರೋತ್ತರ ಕನ್ನಡ ಸಂಘಟನೆಗಳನ್ನು ಗುರುತಿಸುವ ಭರವಸೆಯನ್ನೂ ನೀಡಿದೆ.

ಸಿ. ಕರ್ನಾಟಕಕ್ಕೆ ವಲಸೆ ಬಂದಿರುವ ಕಾಶ್ಮೀರಿ ಪಂಡಿತರ ಕಲ್ಯಾಣಕ್ಕಾಗಿ ಪಕ್ಷವು ₹ 15 ಕೋಟಿ ವೆಚ್ಚದಲ್ಲಿ ಕಾಶ್ಮೀರ ಸಾಂಸ್ಕೃತಿಕ ಕೇಂದ್ರ ಸ್ಥಾಪಿಸುವುದಾಗಿ ಘೋಷಿಸಿದ್ದು, ₹ 25 ಕೋಟಿ ಒಂದು ಬಾರಿ ಅನುದಾನ ನೀಡಲಿದೆ.

**10. ಅಲ್ಪಸಂಖ್ಯಾತರು, ವೃದ್ಧರು, ಮಾಜಿ ಸೈನಿಕರ ಕಲ್ಯಾಣ ಕ್ರಮಗಳು–** ಲಿಂಗ ಅಲ್ಪಸಂಖ್ಯಾತರಿಗೆ ಮಂಗಳಮುಖಿ ಕಲ್ಯಾಣ ಮಂಡಳಿ ಮತ್ತು ಫೀಲ್ಡ್ ಮಾರ್ಷಲ್ ಕರಿಯಪ್ಪ ಮಾಜಿ ಸೈನಿಕರ ಅಭಿವೃದ್ಧಿ ಮಂಡಳಿಯನ್ನು ಸ್ಥಾಪಿಸಲು ಪಕ್ಷವು ಭರವಸೆ ನೀಡಿದೆ. ಹಿರಿಯ ನಾಗರಿಕರಿಗೆ ಎರಡು ವರ್ಷಗಳಿಗೊಮ್ಮೆ ಕರ್ನಾಟಕದ 15 ಪವಿತ್ರ ಸ್ಥಳಗಳಲ್ಲಿ ಒಂದಕ್ಕೆ ಮತ್ತು ಭಾರತದ 10 ಪವಿತ್ರ ಸ್ಥಳಗಳಲ್ಲಿ ಒಂದಕ್ಕೆ ಉಚಿತ ತೀರ್ಥಯಾತ್ರೆಯ ಭರವಸೆ ನೀಡಲಾಗಿದೆ. ಲಿಂಗ ಅಲ್ಪಸಂಖ್ಯಾತರಿಗೆ ಪೊಲೀಸ್ ನೇಮಕಾತಿಯಲ್ಲಿ 1% ಹುದ್ದೆಗಳನ್ನು ಕಾಯ್ದಿರಿಸುವುದಾಗಿಯೂ ಘೋಷಿಸಿದೆ

**11. ಬೆಂಗಳೂರಿಗೆ ಭರವಸೆಗಳು–** ಅಧಿಕಾರಕ್ಕೆ ಬಂದ ಒಂದು ವರ್ಷದೊಳಗೆ ನಮ್ಮ ಮೆಟ್ರೋದ 3 ನೇ ಹಂತವನ್ನು ಪೂರ್ಣಗೊಳಿಸುವುದಾಗಿ ಪಕ್ಷವು ಭರವಸೆ ನೀಡಿದೆ. ಕೆರೆಗಳನ್ನು ಪುನರುಜ್ಜೀವನಗೊಳಿಸಲಾಗುವುದು ಮತ್ತು ಈ ಜಲಮೂಲಗಳಲ್ಲಿ ಜಲ ಕ್ರೀಡೆಗಳನ್ನು ಉತ್ತೇಜಿಸಲಾಗುವುದು. ಬಿಬಿಎಂಪಿಯನ್ನು ಆರ್ಥಿಕವಾಗಿ ಸ್ವತಂತ್ರಗೊಳಿಸಲು ಪಕ್ಷ ಪ್ರಯತ್ನಿಸಲಿದೆ ಎಂದು ಭರವಸೆ ನೀಡಿದ್ದಾರೆ.

**12. ಇತರೆ –** ಪ್ರವಾಸೋದ್ಯಮ ಕ್ಷೇತ್ರದಲ್ಲಿ ₹ 5,000 ಕೋಟಿ ಹೂಡಿಕೆ ಮತ್ತು ಒಖಒಇ ವಲಯಕ್ಕೆ ₹ 1,009 ಕೋಟಿ ನಿಧಿಯನ್ನು ಸ್ಥಾಪಿಸುವ ಭರವಸೆಯನ್ನೂ ಪಕ್ಷ ನೀಡಿದೆ. ಸ್ಕಾಲರ್‌ಶಿಪ್ ನೀಡಲು ₹

2,000 ಕೋಟಿ ಬೀಜ ನಿಧಿಯೊಂದಿಗೆ ಕರ್ನಾಟಕ ರಾಜ್ಯ ಶೈಕ್ಷಣಿಕ ಹಣಕಾಸು ನಿಗಮಕ್ಕೆ ಪಕ್ಷವು ಭರವಸೆ ನೀಡಿದೆ. ಶಿಕ್ಷಣ ಮತ್ತು ಆರೋಗ್ಯ ಇಲಾಖೆಯಲ್ಲಿ ಖಾಲಿ ಇರುವ ಶಿಕ್ಷಕರು, ವೈದ್ಯರು ಮತ್ತು ಇತರ ಸಿಬ್ಬಂದಿಯ ಎಲ್ಲಾ ಹುದ್ದೆಗಳನ್ನು ಭರ್ತಿ ಮಾಡುವುದಾಗಿ ಭರವಸೆ ನೀಡಿದೆ. ಸೋಲಾರ್ ವಿದ್ಯುತ್ ಉತ್ಪಾದನೆಯನ್ನು 5,000 ಮೆಗಾವ್ಯಾಟ್ ಹೆಚ್ಚಿಸಲು ಪಕ್ಷವು ಶ್ರಮಿಸುತ್ತದೆ.

**ಕಾಂಗ್ರೆಸ್ ನಾಯಕತ್ವದ ಪಾತ್ರ**

ಕಾಂಗ್ರೆಸ್ ಪಕ್ಷ ಸ್ಥಳೀಯ ಸಮಸ್ಯೆಗಳ ಮೇಲೆ ಕೇಂದ್ರೀಕರಿಸಿ ಚುನಾವಣೆ ಎದುರಿಸಿದೆ ಹಾಗೂ ಸ್ಥಳೀಯ ಮುಖಂಡರ ನೇತೃತ್ವದಲ್ಲಿ ಚುನಾವಣಾ ಪ್ರಚಾರ ನಡೆಸಿದೆ ಮತ್ತು ಪಕ್ಷದ ಗೆಲುವಿಗೆ ಸ್ಥಳಿಯ ನಾಯಕರ ಪರಿಶ್ರಮವೇ ಕಾರಣವಾಗಿದೆ. ಕಾಂಗ್ರೆಸ್‌ನಲ್ಲಿ ಎರಡು ದೊಡ್ಡ ನಾಯಕರ ಬಣಗಳ ನಡುವಿನ ಪೈಪೋಟಿ ಬಹಳ ದಿನಗಳಿಂದ ಚರ್ಚೆಯ ವಿಷಯವಾಗಿತ್ತು ಹಾಗೂ ಈ ಗುಂಪುಗಾರಿಕೆಯು ಕಾಂಗ್ರೆಸ್ ಸೋಲಿಗೆ ಕಾರಣವಾಗಬಹುದೆಂದು ಕೆಲವರು ಆತಂಕ ವ್ಯಕ್ತಪಡಿಸಿದ್ದರು ಆದರೆ, ಅದು ಯಾವುದೇ ರಿತಿಯಲ್ಲಿ ಚುನಾಣೆಯಲ್ಲಿ ಪ್ರಭಾವ ಬಿರಲಿಲ್ಲ. ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ಒಟ್ಟಾಗಿ ಹಾಗೂ ಒಂದು ತಂಡವಾಗಿ ಚುನಾವಣೆ ಎದುರಿಸಿದರು ಮತ್ತು ಗುರಿಯನ್ನು ಸಾಧಿಸಲು ತಮ್ಮ ವಯಕ್ತಿಕ ಹಿತಾಸಕ್ತಿಯನ್ನು ಮತ್ತು ಭಿನ್ನಾಭಿಪ್ರಾಯಗಳನ್ನು ಬದಿಗಿಟ್ಟು ಚುನಾವಣೆ ಎದುರಿಸಿದರು. ಒಂದು ತಂಡವನ್ನು ರಚಿಸುವುದು ಮತ್ತು ಅದನ್ನು ಮುಂದುವರಿಸುವದು ಅವರ ನಿರ್ಧಾರವಾಗಿತ್ತು.

**ಕರ್ನಾಟಕ ಚುನಾವಣೆ– 2023ರಲ್ಲಿ ಕಾಂಗ್ರೆಸ್‌ನ ಯಶಸ್ಸು**

1. 'ಖಾತರಿ'ಗಳ ಭರವಸೆಯು ಪ್ರಚಾರದ ಸಮಯದಲ್ಲಿ ಜನರೊಂದಿಗೆ ವಿವರಿಸಿರುವದು ಹಾಗೂ ಖಾತರಿ ಕಾರ್ಡನ್ನು ಪ್ರತಿ ಮನೆಗೆ ನೀಡಿರುವದು ಅದರಲ್ಲಿಯೂ ವಿಶೇಷವಾಗಿ ಮಹಿಳೆಯರು ಈ ಚುನಾವಣೆಯಲ್ಲಿ ಮತ ಚಲಾಯಿಸುವ ಸಂದರ್ಭದಲ್ಲಿ ಯೋಚಿಸಿ ಮತ ಚಲಾಯಿಸುವಂತೆ ಮಾಡಿತು ಇದು ಚುನಾವಣೆಯಲ್ಲಿ ಕಾಂಗ್ರೆಸ್‌ನ ಅದ್ಭುತ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿತು.

2. ವಿವಿಧ ವಿಶ್ಲೇಷಣೆಗಳು ಮತ್ತು ವಿವಿಧ ಸಿದ್ಧಾಂತಗಳು ಚುನಾವಣೆಯಲ್ಲಿ ಕಾಂಗ್ರೆಸ್ ಗೆಲುವಿಗೆ ತಮ್ಮದೆ ಆದ ರೀತಿಯಲ್ಲಿ ವಿವರಿಸಿದರು. ಬಡವರು, ದುರ್ಬಲರು ಮತ್ತು ಹಿಂದುಳಿದ ಸಮುದಾಯಗಳು, ದಲಿತರು ಮತ್ತು ಆದಿವಾಸಿಗಳ ಪರವಾಗಿ ಕಾಂಗ್ರೆಸ್ ನಿಂತಿರುವುದು ಗೆಲುವಿಗೆ ಕಾರಣ ಎಂದು ಹಲವು ವಿಶ್ಲೇಷಿಸಿದ್ದಾರೆ

3. ಕಾಂಗ್ರೆಸ್ ಬಡವರ ಪರವಾದ ಪಕ್ಷ ಎಂದು ಚಿತ್ರಿಸಲು ಸಾದ್ಯವಾಗಿರುವುದು ಗೆಲುವಿಗೆ ಕಾರಣವಾಯಿತು.

4. ನಾಯಕರ ನಡುವಿನ ವೈಯಕ್ತಿಕ ಭಿನ್ನಾಭಿಪ್ರಾಯದ ನಡುವೆಯೂ ಕರ್ನಾಟಕದಲ್ಲಿ ಕಾಂಗ್ರೆಸ್ ನಾಯಕತ್ವ ಒಗ್ಗೂಡಿರುವದು ಚುನಾವಣೆಯಲ್ಲಿ ಕಾಂಗ್ರೆಸ್ ಪರವಾದ ವಾತಾವರಣ ನಿರ್ಮಾಣವಾಗಲು ಕಾರಣವಾಯಿತು.

5. ಚುನಾವಣಾ ಪ್ರಚಾರವನ್ನು ಕಾಂಗ್ರೆಸ್ ವ್ಯವಸ್ಥಿತವಾಗಿ ಮಾಡಿರುವುದರಿಂದ ಗೆಲ್ಲಲು ಕಾರಣವಾಯಿತು

6. ಮತದಾರರನ್ನು ತಲುಪಲು ಸಾಮಾಜಿಕ ಮಾಧ್ಯಮ ಮತ್ತು ಇತರ ವೇದಿಕೆಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಲಾಗಿದೆ

7. ಕೋಮು ವಿಷಯಕ್ಕೆ ಸಂಬಂಧಿಸಿದಂತೆ ಪಕ್ಷವು ತೆಗೆದುಕೊಂಡ ಸಮತೋಲಿತ ನಿರ್ಧಾರ ಸಹಾಯವಾಯಿತು.

8. ಕಾಂಗ್ರೆಸ್‌ನ ಆರೋಪಗಳಿಗೆ ಪ್ರತಿದಾಳಿ ನಡೆಸುವಲ್ಲಿ ಬಿಜೆಪಿ ವೈಫಲ್ಯವು ಕರ್ನಾಟಕದಲ್ಲಿ ಕಾಂಗ್ರೆಸ ಪರವಾದ ಹೊಸ ವಾತಾವರಣವನ್ನು ಸೃಷ್ಟಿಸಲು ಪಕ್ಷಕ್ಕೆ ಸಹಾಯ ಮಾಡಿತು

9. ಜನ ನಾಯಕರಾದ ಸಿದ್ದರಾಮಯ್ಯ ಚುನಾವಣಾ ಪ್ರಚಾರ ಮತ್ತು ರಾಜಕೀಯ ತಂತ್ರಜ್ಞ ಡಿ ಕೆ ಶಿವಕುಮಾರ್ ತಂತ್ರಗಳು ಚುನಾವಣೆಯಲ್ಲಿ ಹೆಚ್ಚು ಸ್ಥಾನ ಪಡೆಯಲು ಸಹಾಯ ಮಾಡಿತು.

10. ಜೆಡಿ(ಎಸ್) ಪಕ್ಷವು ಕುಟುಂಬ ರಾಜಕಾರಣದ ಕಳಂಕದಿಂದ ಹೊರಬರಲು ವಿಫಲವಾಗಿದ್ದರಿಂದ ಚುನಾವಣೆಯ ಚಿತ್ರಣವನ್ನೆ ಬದಲಾಯಿಸಿತು.

**ಬಿಜೆಪಿಯ ಸೋಲಿಗೆ ಕಾರಣಗಳು.**

**1. ಭ್ರಷ್ಟಾಚಾರ ಆರೋಪ:–** ಭ್ರಷ್ಟಾಚಾರದ ಮೇಲೆ ಕೇಂದ್ರೀಕರಿಸಿದ ಬಿಜೆಪಿ ವಿರುದ್ಧ ಕಾಂಗ್ರೆಸ್‌ನ ಉತ್ಸಾಹಭರಿತ ಅಭಿಯಾನವು ಮತದಾರರಲ್ಲಿ ಬಿಜೆಪಿ ವಿರುದ್ದದ ವಾತಾವರಣವನ್ನು ಸೃಷ್ಟಿಸಿತು. ಗುತ್ತಿಗೆದಾರರೊಬ್ಬರ ಆತ್ಮಹತ್ಯೆಯ ನಂತರ 2022 ರಿಂದ ಕಾಂಗ್ರೆಸ್ 'ಪೇಸಿಎಂ' ಮತ್ತು '40% ಸರ್ಕಾರ' (ಬಿಜೆಪಿ ಸರ್ಕಾರವು ಯೋಜನೆಗಳಲ್ಲಿ 40% ಪಡೆದುಕೊಂಡಿದೆ ಎಂಬ ಗುತ್ತಿಗೆದಾರರ ಸಂಘದ ಅಧ್ಯಕ್ಷ ಡಿ ಕೆಂಪಣ್ಣ ಅವರ ಆರೋಪವನ್ನು ಉಲ್ಲೇಖಿಸಿ) ಪ್ರಚಾರಗಳನ್ನು ನಡೆಸಿತು. ಲಂಚ ಪ್ರಕರಣದಲ್ಲಿ ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಮತ್ತು ಅವರ ಪುತ್ರನ ಬಂಧನಕ್ಕೆ ಕಾರಣವಾದ ಲೋಕಾಯುಕ್ತ ತನಿಖೆಯು ಕಾಂಗ್ರೆಸ್ ಪಕ್ಷವನ್ನುಬಲಪಡಿಸಲು ಮತ್ತು ಭ್ರಷ್ಟಾಚಾರದ ವಿಷಯದಲ್ಲಿ ಬಿಜೆಪಿಯ ಇಮೇಜ್‌ಗೆ ಧಕ್ಕೆ ತಂದಿತು.

2. **ಇತಿಹಾಸ:** ಅಧಿಕಾರ ವಿರೋಧಿ ಅಲೆ ಬಿಜೆಪಿಗೆ ಪ್ರಾರಂಬದಲ್ಲಿಯೇ ಅಡ್ಡಿಯಾಯಿತು. ಎಚ್‌ಡಿ ಕುಮಾರಸ್ವಾಮಿ ನೇತೃತ್ವದಲ್ಲಿ ಕಾಂಗ್ರೆಸ್ ಮತ್ತು ಜನತಾ ದಳ–ಜಾತ್ಯತೀತ ಪಕ್ಷಗಳು ರಚಿಸಿದ ಅಸಂಭವ ಸಮ್ಮಿಶ್ರ ಸರ್ಕಾರವು ಶಾಸಕರ ಗುಂಪಿಗೆ ರಾಜೀನಾಮೆ ನೀಡಿ ಪತನಗೊಂಡ ನಂತರ ಬಿಜೆಪಿ 2019 ರಿಂದ ಅಧಿಕಾರದಲ್ಲಿದೆ. ಮತ್ತು ಕರ್ನಾಟಕದಲ್ಲಿ 1985 ರಿಂದ ಅಧಿಕಾರದಲ್ಲಿದ್ದ ಪಕ್ಷಕ್ಕೆ ಪುನಃ ಮತ ಹಾಕಿಲ್ಲ. ಬಿಜೆಪಿ ತನ್ನ ಮತ ಬೇಟೆಗಾಗಿ ಮತ್ತು "ಆಡಳಿತ ವಿರೋದಿ ಅಲೆ" ವಿರುದ್ಧ ಹೋರಾಡಲು ಪ್ರಧಾನಿ ಮೋದಿಯವರ ಪ್ರಚಾರದ ಮೂಲಕ ಪ್ರಯತ್ನಿಸಿತು.

**3. ಮೀಸಲಾತಿ ಮತ್ತು ಧ್ರುವೀಕರಣ–** ಸರ್ಕಾರಿ ಉದ್ಯೋಗ ಮತ್ತು ಶಿಕ್ಷಣದಲ್ಲಿ ಇತರ ಹಿಂದುಳಿದ ಜಾತಿಗಳ (ಔಃಅ) 2ಃ ವರ್ಗದಲ್ಲಿ ಮುಸ್ಲಿಮರಿಗೆ 4% ಮೀಸಲಾತಿಯನ್ನು ರದ್ದುಪಡಿಸಿ ಮತ್ತು ಎರಡು ಪ್ರಬಲ ಸಮುದಾಯಗಳಾದ ಒಕ್ಕಲಿಗ ಮತ್ತು ಲಿಂಗಾಯತ ನಡುವೆ ಸಮಾನವಾಗಿ ಹಂಚಿಕೆ ಮಾಡಿದ ಬಿಜೆಪಿ ಸರ್ಕಾರದ ಕ್ರಮ ವಿರೋಧ ಪಕ್ಷಕ್ಕೆ ಮತ್ತೊಂದು ಪ್ರಚಾರದ ಅಸ್ತ್ರವಾಯಿತು. ಪರಿಶಿಷ್ಟ ಜಾತಿ ಸಮುದಾಯದ ಒಳಮೀಸಲಾತಿಗೆ ಸಂಬಂಧಿಸಿದಂತೆ ರಾಜ್ಯ ಸರ್ಕಾರದ ಕೊನೆಯ ಕ್ಷಣದ ನಿರ್ಧಾರವು ಅದರ ಒಳಪಂಗಡದ ಇನ್ನೊಂದು ವರ್ಗವನ್ನು ಕೆರಳಿಸಿತು. ಇದಕ್ಕೆ ವ್ಯತಿರಿಕ್ತವಾಗಿ, ಹಿಂದುಳಿದ ಜಾತಿಗಳ ಗುಂಪುಗಳಿಗಾಗಿ ಕೆಲಸ ಮಾಡಲು ಮತ್ತು ಮೀಸಲಾತಿ ಪ್ರಮಾಣವನ್ನು 75% ಕ್ಕೆ ಏರಿಸಲು, ಅಲ್ಪಸಂಖ್ಯಾತ ಮೀಸಲಾತಿಗಳನ್ನು ಮರುಸ್ಥಾಪಿಸಲು ಮತ್ತು ಲಿಂಗಾಯತರಿಗೆ ಮೀಸಲಾತಿಯನ್ನು ಹೆಚ್ಚಿಸಲು ಕಾಂಗ್ರೆಸ್ ವಾಗ್ದಾನ ಮಾಡಿತು.

**4. ಸ್ಥಳೀಯ ಸಮಸ್ಯೆಗಳು: –** ಬೆಲೆ ಏರಿಕೆ ಮತ್ತು ಭ್ರಷ್ಟಾಚಾರದಂತಹ ಸ್ಥಳೀಯ ಸಮಸ್ಯೆಗಳು ಬಿಜೆಪಿಯ ಸೋಲಿನಲ್ಲಿ ಬಹು ದೊಡ್ಡ ಪಾತ್ರವನ್ನು ವಹಿಸಿವೆ. ಇಂಧನ ಮತ್ತು ಅಡುಗೆ ಅನಿಲದಂತಹ ಅಗತ್ಯ ವಸ್ತುಗಳ ಬೆಲೆಗಳ ಏರಿಕೆ ಮತ್ತು ನಿರುದ್ಯೋಗದ ಹೆಚ್ಚಳ ಬಡ ಮತ್ತು ಮಧ್ಯಮ ವರ್ಗದ ಬೆಂಬಲವನ್ನು ಕ್ರೋಢೀಕರಿಸಲು ಪ್ರತಿಪಕ್ಷವಾದ ಕಾಂಗ್ರೆಸ್ ಮತ್ತು ಜೆಡಿ (ಎಸ್) ಗೆ ಸಹಾಯವಾಯಿತು. ಬಿಪಿಎಲ್ ಕುಟುಂಬಗಳಿಗೆ ಪ್ರತಿ ವರ್ಷ ಮೂರು ಉಚಿತ ಅಡುಗೆ ಅನಿಲ ಸಿಲಿಂಡರ್, ಸಬ್ಸಿಡಿ ಆಹಾರ ಒದಗಿಸಲು ಅಟಲ್ ಆಹಾರ ಕೇಂದ್ರಗಳನ್ನು ಮತ್ತು ಬಿಪಿಎಲ್ ಕುಟುಂಬಗಳಿಗೆ ಪ್ರತಿ ಅರ್ಧ ಲೀಟರ್ ಉಚಿತ ನಂದಿನಿ ಹಾಲು ನೀಡುವ ಭರವಸೆಗಳು ಮತದಾರರ ಮೇಲೆ ತನ್ನ ಪ್ರಭಾವವನ್ನು ಬಿರಲು ಬಿಜೆಪಿಗೆ ಸಾದ್ಯವಾಗಿಲ್ಲ.

**5. ಅನುಭವಿಗಳ ನಿರ್ಗಮನ–** ಮಾಜಿ ಮುಖ್ಯಮಂತ್ರಿ ಜಗದೀಶ್ ಶೆಟ್ಟರ್ ಮತ್ತು ಮಾಜಿ ಉಪಮುಖ್ಯಮಂತ್ರಿ ಲಕ್ಷ್ಮಣ ಸವದಿ ಸೇರಿದಂತೆ ಹಲವು ಅನುಭವಿ ನಾಯಕರಿಗೆ ವಯಸ್ಸು ಮತ್ತು ಇತರ ಕಾರಣಗಳಿಂದಅಭ್ಯರ್ಥಿಯಾಗಲು ನಿರಾಕರಿಸುವ ಮೂಲಕ ಬದಲಾವಣೆಯಬಿಜೆಪಿಯ ಪ್ರಯತ್ನವು ಬಿಜೆಪಿಗೆ ಹೊಡೆತ ನೀಡಿದವು ಹಾಗೂ ಬಿಜೆಪಿಯು ಲಿಂಗಾಯತ ವಿರೋಧಿ ಪಕ್ಷಎಂದು ಬಿಂಬಿಸಲು

ಕಾಂಗ್ರೆಸ್‌ಗೆ ಈ ನಿರ್ಧಾರ ಅವಕಾಶ ನೀಡಿತು. ಈ ಇಬ್ಬರು ನಾಯಕರು ಉತ್ತರ ಕರ್ನಾಟಕದಲ್ಲಿ ಕನಿಷ್ಠ 25 ಸ್ಥಾನಗಳ ಫಲಿತಾಂಶದ ಮೇಲೆ ಪ್ರಭಾವವನ್ನು ಬೀರಿದ್ದಾರೆ.

**6. ಲಿಂಗಾಯತ ಪ್ರಾಬಲ್ಯ:**ಈ ಹಿಂದಿನ ಚುನಾವಣೆಯಲ್ಲಿ ಲಿಂಗಾಯತ ಸಮುದಾಯವನ್ನು ಸೆಳೆಯುವಲ್ಲಿ ಬಿಜೆಪಿ ಯಶಸ್ವಿಯಾಗಿತ್ತು ಹಾಗೂ ಆ ಸಮುದಾಯದ ಮೇಲೆ ಅತಿಯಾಗಿ ಅವಲಂಬಿತವಾಗಿತ್ತು. ಲಿಂಗಾಯತ ಮುಖಂಡರು ಮತ್ತು ಅಭ್ಯರ್ಥಿಗಳ ಮೇಲೆ ಪಕ್ಷ ಗಮನ ಹರಿಸಿರುವುದು ಇತರೆ ಜಾತಿ ಗುಂಪುಗಳ ಅಸಮಾಧಾನಕ್ಕೆ ಕಾರಣವಾಗಿತ್ತು ಇದು ಬಿಜೆಪಿ ಲಿಂಗಾಯತ ಪ್ರಾಬಲ್ಯದ ಪಕ್ಷ ಎಂಬ ಅಭಿಪ್ರಾಯಕ್ಕೆ ಕಾರಣವಾಗಿದ್ದರಿಂದ ಪಕ್ಷದ ವರ್ಚಸ್ಸಿಗೆ ಧಕ್ಕೆಯಾಯಿತು. ಹಾಗೂ 2023ರ ಚುನಾವಣೆಯಲ್ಲಿ ಸ್ವಲ್ಪ ಮಟ್ಟದ ಲಿಂಗಾಯತ ಮತದಾನದ ಪಾಲೂ ಕಾಂಗ್ರೆಸ್ ಕಡೆಗೆ ವಾಲಿದ್ದರಿಂದ ಅದರ ಪರಿಣಾಮವಾಗಿ ಹಲವು ಕ್ಷೇತ್ರಗಳು ಬಿಜೆಪಿ ಕೈತಪ್ಪಿದವು.

**7. ಗುಂಪುಗಾರಿಕೆ:** ಕರ್ನಾಟಕದಲ್ಲಿ ಬಿಜೆಪಿಯ ಮತ್ತೊಂದು ದೌರ್ಬಲ್ಯವೆಂದರೆ ಗುಂಪುಗಾರಿಕೆ. ಪಕ್ಷವು ಹಲವಾರು ಬಣಗಳನ್ನು ಹೊಂದಿದೆ, ಪ್ರತಿಯೊಂದೂ ಬಣವು ತನ್ನದೇ ಆದ ಕಾರ್ಯಸೂಚಿ ಮತ್ತು ಮಹತ್ವಾಕಾಂಕ್ಷೆಗಳನ್ನು ಹೊಂದಿದೆ. ಇದು ಪಕ್ಷದೊಳಗಿನ ಆಂತರಿಕ ಕಚ್ಚಾಟಕ್ಕೆ ಕಾರಣವಾಗಿದ್ದು, ಕೆಲವು ಕ್ಷೇತ್ರಗಳಲ್ಲಿ ಸೋಲಿಗೆ ಇದು ಕಾರಣವಾಗಿದೆ

**8. ಸ್ಥಳೀಯ ಹಂತದಲ್ಲಿ ಸಂಪರ್ಕದ ಕೊರತೆ:** ಕರ್ನಾಟಕದ ಕೆಲವು ಭಾಗಗಳಲ್ಲಿ ಸ್ಥಳೀಯ ಹಂತದಲ್ಲಿ ಸಮಸ್ಯೆಯನ್ನು ಅರಿಯಲು ಬಿಜೆಪಿಯು ವಿಫಲವಾಗಿದೆ. ದೊಡ್ಡ ದೊಡ್ಡ ಅಭಿವೃದ್ಧಿ ಯೋಜನೆಗಳತ್ತ ಗಮನ ಹರಿಸುತ್ತಿರುವ ಪಕ್ಷವು ಸಾಮಾನ್ಯ ಜನರ ಸಮಸ್ಯೆಗಳ ಬಗ್ಗೆ ಆಸಕ್ತಿ ಹೊಂದಿಲ್ಲ ಎಂಬ ಅಭಿಪ್ರಾಯಮೂಡಿದ್ದರಿಂದ, ಕೆಲವು ಗ್ರಾಮೀಣ ಮತ್ತು ಅರೆ–ನಗರಗಳಲ್ಲಿ ಅದರ ಜಯದ ಕನಸನ್ನು ನುಚ್ಚುನೂರು ಮಾಡಿತು.

**9. ಬಲಿಷ್ಠ ನಾಯಕತ್ವವಿಲ್ಲ:** 2023ರ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿಯಲ್ಲಿ ಉತ್ತಮ ಮತ್ತು ಬಲಿಷ್ಠ ನಾಯಕತ್ವ ಇರಲಿಲ್ಲ. ಹಾಲಿ ಮುಖ್ಯಮಂತ್ರಿಯು ಜನಸಾಮಾನ್ಯರ ನಾಯಕನಾಗಿರಲಿಲ್ಲ. B.S. ಯಡಿಯೂರಪ್ಪ 2023ರ ಚುನಾವಣೆಯಲ್ಲಿಪಕ್ಷದ ಮುಖ್ಯಮಂತ್ರಿ ಅಭ್ಯರ್ಥಿಯಾಗಿರಲಿಲ್ಲ. (ಕಳೆದ 40 ವರ್ಷಗಳಲ್ಲಿ ಅವರು 2013ರ ಚುನಾವಣೆ ಹೊರತುಪಡಿಸಿ ಕರ್ನಾಟಕದ ಬಿಜೆಪಿಯಲ್ಲಿ ಮುಂಚೂಣಿ ನಾಯಕರಾಗಿದ್ದರು). ಬಿಜೆಪಿಯು ಕೇಂದ್ರ ನಾಯಕತ್ವದ ಮೇಲೆ ಹೆಚ್ಚು ಅವಲಂಬಿತವಾಗಿತ್ತು ಮತ್ತು ಮತದಾರರ ಮೇಲೆ ಪ್ರಭಾವ ಬೀರಲು ಪ್ರಧಾನಿ ನರೇಂದ್ರ ಮೋದಿಯವರಿಂದ ಸಾಕಷ್ಟು ರ್‍ಯಾಲಿ ಮತ್ತು ಪ್ರಚಾರವನ್ನು ನಡೆಸಿದ್ದರು. ಆದರೆ ಈ ತಂತ್ರಗಾರಿಗೆ ಚುನಾವಣೆ ಗೆಲ್ಲಲು ಸಹಾಯವಾಗಿಲ್ಲ ಹಾಗೂ ರಾಜ್ಯ

ಕಾಂಗ್ರೆಸ್ ಪಕ್ಷದಲ್ಲಿ ಇರುವಂತಹ ಬಲಿಷ್ಠ ನಾಯಕತ್ವ ಇಲ್ಲದ್ದರಿಂದ ಚುನಾವಣೆಯಲ್ಲಿ ಕೆಟ್ಟದಾಗಿ ಸೋಲಬೇಕಾಯಿತು.

**10. ಅಮುಲ್ ವಿರುದ್ಧ ನಂದಿನಿ ವಿವಾದ–** ಗುಜರಾತ್ ರಾಜ್ಯದ ಹಾಲಿನ ಸಹಕಾರಿ ಬ್ರಾಂಡ್ ಆಗಿರುವ ಅಮುಲ್‌ಗೆ ಕರ್ನಾಟಕದಲ್ಲಿ ಮಾರುಕಟ್ಟೆ ಒದಗಿಸಲು ಪ್ರಯತ್ನಿಸಿರುವದನ್ನುಕಾಂಗ್ರೆಸ್ ನಾಯಕರು ವಿವಾದವಾಗಿಸುವಲ್ಲಿ ಸಫಲರಾದರು. ಬಿಜೆಪಿ ಬೆಂಬಲಿತ ಅಮುಲ್‌ನ ಪ್ರವೇಶವು ಕನ್ನಡಿಗರ ಅಸ್ಮಿತೆಗೆ ನಿಕಟ ಸಂಬಂಧ ಹೊಂದಿರುವ ಕರ್ನಾಟಕ ಹಾಲು ಒಕ್ಕೂಟದ (ಕೆಎಂಎಫ್) ಬ್ರ್ಯಾಂಡ್ 'ನಂದಿನಿ'ಗೆ ಅಪಾಯವನ್ನುಂಟುಮಾಡುತ್ತದೆ ಎಂದು ಪ್ರತಿಪಕ್ಷ ಕಾಂಗ್ರೆಸ್ ಮತ್ತು ಜೆಡಿಎಸ್ (ಎಸ್) ಆರೋಪಿಸಿದ್ದರಿಂದ ಮೈಸೂರು ಕರ್ನಾಟಕದಲ್ಲಿ ಬಿಜೆಪಿ ಹಿನಾಯ ಪ್ರದರ್ಶನ ನೀಡಿತು.

**ಸಮಾರೋಪ**

2023ರ ಕರ್ನಾಟಕ ವಿಧಾನಸಭಾ ಚುನಾವಣೆಯು ರಾಷ್ಟ್ರೀಯ ಮಟ್ಟದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಅಸ್ತಿತ್ವದ ಪ್ರಶ್ನೆಯಾಗಿತ್ತು. ಕಾಂಗ್ರೆಸ್ ಹಲವು ರಾಜ್ಯಗಳನ್ನು ಚುನಾವಣೆಯಲ್ಲಿ ಸೋಲನ್ನು ಅನುಭವಿಸಿತ್ತು ಮತ್ತು ಕೆಲವು ರಾಜ್ಯಗಳಲ್ಲಿ ಅಧಿಕಾರವನ್ನು ಪಡೆದಿದ್ದರು ಅದು ಅತ್ಯುತ್ತಮವಾದ ಗೆಲುವು ಆಗಿರಲಿಲ್ಲ. ಆದ್ದರಿಂದ ಭಾರತೀಯ ರಾಜಕೀಯದಲ್ಲಿ ದೀರ್ಘಕಾಲ ಬದುಕಲು ಅತ್ಯಂತ ಹಳೆಯ ಪಕ್ಷಕ್ಕೆ ಅತ್ಯುತ್ತಮ ಗೆಲುವಿನ ಅಗತ್ಯವಿತ್ತು. ಪಕ್ಷದ ರಾಜ್ಯ ನಾಯಕತ್ವವು 2022 ರಿಂದ ಚುನಾವಣಾ ಕೆಲಸವನ್ನು ಪ್ರಾರಂಭಿಸಿದ್ದರು ಮತ್ತು ವಿವಿಧ ಮಾಧ್ಯಮಗಳನ್ನು ಪರಿಣಾಮಕಾರಿಯಾಗಿ ಬಳಸಿಕೊಂಡಿದ್ದರು ಮತ್ತು ಬಿಜೆಪಿ ಸರ್ಕಾರದ ವಿರುದ್ಧ ಪ್ರಚಾರವನ್ನು ಸರಿಯಾದ ಸಂದರ್ಭದಲ್ಲಿ ಹಾಗೂ ಪರಿಣಾಮಕಾರಿಯಾಗಿ ಪ್ರಾರಂಭಿಸಿತು ಮತ್ತು ಈ ಪ್ರಯತ್ನಗಳಲ್ಲಿ ಯಶಸ್ವಿ ಕೂಡಾ ಆಯಿತು. ಬಿಜೆಪಿ ಪಕ್ಷದ ತಪ್ಪು ನಿರ್ಧಾರವು ಕಾಂಗ್ರೆಸ್ ಪಕ್ಷಕ್ಕೆ ಚುನಾವಣಾ ಅಸ್ತ್ರವಾಯಿತು ಮತ್ತು ಬಿಜೆಪಿ ಮುಖ್ಯವಾಗಿ ಕೋಮು ಧ್ರುವೀಕರಣವನ್ನು ಅವಲಂಬಿಸಿತ್ತು ಮತ್ತ ಆ ಪ್ರಯತ್ನದಲ್ಲಿ ಅಂತಿಮವಾಗಿ ಚುನಾವಣೆಯಲ್ಲಿ ಫಲಕೊಡಲು ಸಾದ್ಯವಾಗಿಲ್ಲ. ಹಿಜಾಬ್ ಸಮಸ್ಯೆ, ಹಿಂದುತ್ವ, ಬಜರಂಗದಳ ನಿಷೇಧ (ಕಾಂಗ್ರೆಸ್ ಚುನಾವಣಾ ಪ್ರಣಾಳಿಕೆ) ಮತ್ತು ಶಾಲಾ ಪುಸ್ತಕ ಮಾರ್ಪಾಡು ಬಿಜೆಪಿ ಪಕ್ಷಕ್ಕೆಚುನಾವಣೆಯಲ್ಲಿ ಸಹಾಯ ಮಾಡಲಿಲ್ಲ ಬದಲಿಗೆ ಇದು ಕಾಂಗ್ರೆಸ್ ಪಕ್ಷಕ್ಕೆ ಚುನಾವಣಾ ಪ್ರಚಾರದ ಅಸ್ತ್ರವಾಯಿತು. ಚುನಾವಣಾ ಪ್ರಚಾರದಲ್ಲಿ ಕಾಂಗ್ರೆಸ್ ತೆಗೆದುಕೊಂಡ ಎಲ್ಲ ನಿರ್ಣಯಗಳುಪಕ್ಷಕ್ಕೆ ಉತ್ತಮ ಫಲಿತಾಂಶವನ್ನು ನೀಡಿತು, ವಿಶೇಷವಾಗಿ ಕಾಂಗ್ರೆಸ್‌ನ ಐದು ಭರವಸೆಗಳು,ಪಕ್ಷ ಅಧಿಕಾರಕ್ಕೆ ಬರಲು ಸಹಾಯ ಮಾಡಿತು.

## Reference


1. Dr. Durga Das Basu "Introduction to Indian Constitution" Wadhwa and company, New Delhi 2004
2. J.C Johari Indian Political System" Anmol Publications Pvt. Ltd, New Delhi 2007
3. https://eci.gov.in/
4. https://www.thehindu.com/elections/karnataka-assembly
5. https://thewire.in/politics/karnataka-elections-congress-defeats-bjp
6. https://www.hindustantimes.com/
7. https://economictimes.indiatimes.com/news/politics-and-nation
8. https://www.indiatoday.in/